ಶ್ರೀ ಕೆ.ಎನ್. ನಾಗೇಗೌಡ :— ನಾವು ಒಟ್ಟು ಏಳು ಪ್ರಾಜೆಕ್ಟ್‌ಗಳನ್ನು ಈ ಹೊಸ ನೀರಾವರಿ ನಿಗಮದಿಂದ ತೆಗೆದುಕೊಂಡಿದ್ದೇವೆ. ಆ ಏಳು ಪ್ರಾಜೆಕ್ಟ್‌ಗಳಲ್ಲಿ ತುಂಗಾ ಮೇಲ್ದಂಡೆ ಮತ್ತು ಇತರೆ ಪ್ರಾಜೆಕ್ಟ್‌ಗಳು ಇವೆ. ನಮ್ಮ ಉದ್ದೇಶ ಸುಮಾರು 600 ಕೋಟಿ ಹಣ ರೂ. ಎತ್ತಬೇಕೆಂದು ಇದೆ. ಈ ವರ್ಷ 400 ಕೋಟಿ ರೂ. ಎತ್ತಬೇಕೆಂದು ಇದೆ. ಅದರಲ್ಲಿ ಈಗಾಗಲೇ 263 ಕೋಟಿ ರೂಪಾಯಿಗಳನ್ನು ಎತ್ತಿದ್ದೇವೆ. ಈ ಹಿಪ್ಪರಗಿ ಬ್ಯಾರೇಜ್ ಸೇರಿಸಿಕೊಂಡು 600 ಕೋಟಿ ರೂಪಾಯಿಗಳಿಗೆ ಪ್ಲಾನ್ ಮಾಡಿಕೊಂಡಿದ್ದೇವೆ. ಆ ಪ್ಲಾನ್ ಪ್ರಕಾರ ಮಾಡುತ್ತೇವೆ. ಇದಕ್ಕೆ ದುಡ್ಡಿನ ಕೊರತೆ ಇಲ್ಲ. ಎರಡು ವರ್ಷದಲ್ಲಿ ಈ ಯೋಜನೆಯನ್ನು ಪೂರ್ತಿ ಮಾಡಬೇಕೆನ್ನುವ ಉದ್ದೇಶ ಸಹ ಇದೆ.

ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಅವರು ಉತ್ತರ ಕೊಡಲೇ ಇಲ್ಲ. ಈ ಯೋಜನೆಗೆ ಈ ವರ್ಷ ಎಷ್ಟು ಖರ್ಚು ಮಾಡುತ್ತೀರಿ ಅಂದರೆ ಅದಕ್ಕೆ ಉತ್ತರ ಇಲ್ಲ.

ಅಧ್ಯಕ್ಷರು :— ಅವರು ಎನು ಹೇಳಿದರು ಅಂದರೆ ಒಟ್ಟು ನಮ್ಮ ಅಂದಾಜು ಇರತಕ್ಕಂಥಾದ್ದು 600 ಕೋಟಿ ರೂಪಾಯಿಗಳು. ಈ ವರ್ಷ 400 ಕೋಟಿ ರುಪಾಯಿಗಳನ್ನು ಎತ್ತಬೇಕೆಂದು ಇದೆ. ನಮ್ಮಲ್ಲಿ ಒಟ್ಟು ಏಳು ಪ್ರಾಜೆಕ್ಟ್‌ಗಳು ಇವೆ. ನಾವು ಈ ವರ್ಷದಲ್ಲಿ ಎಷ್ಟು ಕೆಲಸ ಮಾಡಬೇಕೆಂದು ಇದ್ದೇವೆ ಅಷ್ಟಕ್ಕೂ ಹಣ ಇದೆ, ಹಣದ ಕೊರತೆ ಬರುವುದಿಲ್ಲವೆಂದು ಹೇಳಿದ್ದಾರೆ. ನಾವು ಯಾವ ಪ್ರಾಜೆಕ್ಟ್‌ಗೂ ಇಂತಿಷ್ಟೇ ಹಣ ಖರ್ಚು ಮಾಡಬೇಕೆಂಬ ನಿಗದಿ ಮಾಡಿಲ್ಲವೆಂದು ಹೇಳಿದರು. ನಿಮ್ಮ ಅಂದಾಜಿಗಿಂತಲೂ ಇನ್ನೂ ಅವರು ದೂರ ಇದ್ದಾರೆ. ನೀವು ಏನು ನಿರೀಕ್ಷೆ ಮಾಡುತ್ತೀರೋ ಅದಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡುವ ಆಲೋಚನೆಯಲ್ಲಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ :— ಎರಡು ವರ್ಷದಲ್ಲಿ ಈ ಯೋಜನೆ ಮುಗಿಸಬೇಕಾದರೆ ಈ ವರ್ಷ ನೂರು ಕೋಟಿ ರೂಪಾಯಿಗಳನ್ನಾದರೂ ಅವರು ನಮಗೆ ಕೊಡಬೇಕು.

MR. SPEAKER :— You will have to ensure his continuance for two years as Major Irrigation Minister. Please mind that also.

SRI D.R. PATIL :— No. If he joins my party, I will definitely ensure.

ಸವಣೂರು ತಾಲ್ಲೂಕಿನ ಕಳಸೂರು ಬ್ಯಾರೇಜ್.

365(2391) ಶ್ರೀ ಕುನ್ನೂರ ಮಂಜುನಾಥ ಚೆನ್ನಪ್ಪ (ಶಿಗ್ಗಾಂವ) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸವಣೂರು ತಾಲ್ಲೂಕಿನ ಕಳಸೂರು ಬ್ಯಾರೇಜ್‌ಗೆ ಅಡಿಗಲ್ಲು ಹಾಕಿದ್ದು ಯಾವಾಗ;

ಆ) ಸದರಿ ಯೋಜನೆಗೆ ಆಯವ್ಯಯದಲ್ಲಿ ಎಷ್ಟು ಹಣ ಇಡಲಾಗಿದೆ;

ಇ) ಸದರಿ ಯೋಜನೆ ಪ್ರಾರಂಭಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ದಿನಾಂಕ: 28-5-1993.

ಆ) 1999-2000ನೇ ಸಾಲಿನ ಆಯವ್ಯಯದಲ್ಲಿ 20.00 ಲಕ್ಷ ರೂ.ಗಳನ್ನು ಒದಗಿಸಿರುತ್ತದೆ.

ಇ) ಶೇಕಡ 30ರಷ್ಟು ಅನುದಾನದ ಕೊರತೆಯನ್ನು ಮಾರ್ಚ್ 2000 ನಲ್ಲಿನ ಒಟ್ಟಾರೆ ಉಳಿತಾಯದಿಂದ ಭರಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು :— ಅಧ್ಯಕ್ಷರೇ, ಸವಣೂರು ತಾಲ್ಲೂಕು ಕಳಸೂರು ಬ್ಯಾರೇಜ್‌ಗೆ ಅಡಿಗಲ್ಲು ಹಾಕಿದ್ದು 1993ರಲ್ಲಿ ಎಂದು ಉತ್ತರ ಕೊಡಲಾಗಿದೆ. ಈ ವರ್ಷ ಕೇವಲ 20 ಲಕ್ಷ ರೂ.ಗಳನ್ನು ಇಟ್ಟಿದ್ದೀರಿ. ಇದರ ಅಂದಾಜು ಒಂದು ಕೋಟಿ ಮೇಲ್ಪಟ್ಟು ಬರುತ್ತದೆ. ತಾವು ಕೇವಲ 20 ಲಕ್ಷ ರೂ. ಇಟ್ಟಿರುವುದರಿಂದ ಈ ಕೆಲಸ ಆಗಲಿಕ್ಕೆ ಸಾಧ್ಯವೇ ಇಲ್ಲ. ಇದರ ಬದಲಾಗಿ ನನ್ನ ಕ್ಷೇತ್ರದ ಸವಣೂರು ತಾಲ್ಲೂಕು ಮೋತಿಚಲ್ಲಂ ಕೆರೆಗೆ ಶಿಗ್ಗಾವಿ ತಾಲ್ಲೂಕಿನ ಹೊನ್ನಾಪುರ ಕೆರೆಗೆ ಹಣ ಮಂಜೂರು ಮಾಡಲಾಗಿದೆ, ಕೆಲಸ ಪ್ರಾರಂಭಿಸುತ್ತೇವೆ ಅಂತ ಹೇಳಿಕೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿ ಶ್ರೀ ಬಸವರಾಜ ಬೊಮ್ಮಾಯಿ ನೀಡಿದ್ದಾರೆ. ಅದಕ್ಕೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿಗಳು ಇನ್ನೂ ಸಿಕ್ಕಿಲ್ಲ. ಆದರೆ ಯಾವ ಯೋಜನೆಗೆ ತಾಂತ್ರಿಕ, ಆಡಳಿತಾತ್ಮಕ ಮಂಜೂರಾತಿಗಳು ಸಿಕ್ಕಿದೆ ಇದನ್ನು ಮುಗಿಸುವುದರ ಬದಲಿಗೆ ಬೇರೆ ಯೋಜನೆಗಳಿಗೆ ಹಣ ನೀಡಿದ್ದೇವೆಂದು ಹೇಳಿಕೊಂಡು ಚುನಾವಣೆ ಸಂದರ್ಭದಲ್ಲಿ ಏತಕ್ಕೆ ಇಂಥ ಹೇಳಿಕೆ ಮಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೋರುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) :— ಅಧ್ಯಕ್ಷರೇ, ಬೇರೆಯವರು ಈ ಬಗ್ಗೆ ಏನು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೋ ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ. ಇದಕ್ಕೆ 1993ರಲ್ಲಂತೂ ಅಡಿಪಾಯ ಹಾಕಿರುವುದು ಸತ್ಯ. ಈಗ ಬಜೆಟ್‌ನಲ್ಲಿ ಇಟ್ಟಿರುವ 20 ಲಕ್ಷ ರೂ. ಜೊತೆಗೆ ಕೆಲಸ ಪ್ರಾರಂಭಿಸಲು ಇನ್ನೂ ಸ್ವಲ್ಪ ಹಣ ಬೇಕು. 1999-2000 ರಲ್ಲಿ ಈ ಹಣವನ್ನು ತೊಡಗಿಸಿ ಕೆಲಸ ಪ್ರಾರಂಭಿಸಲು ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ :— 2000 ಇಸವಿಯ ಮಾರ್ಚ್ ಒಳಗೆ ಅಂದಿದ್ದೀರಿ. ಅಂದರೆ ನಮ್ಮ ಕಡೆಯಿಂದ ಈ ಕೆಲಸ ಆಗುವಂತಿಲ್ಲ. ಫೆಬ್ರುವರಿ 1998ರಲ್ಲಿ ಆ ಊರಿನ ನಿಯೋಗ ಬಂದು ಹಾವೇರಿಯಲ್ಲಿ ತಮಗೆ ವಿವರಣೆ ಸಹ ಪರಿಸ್ಥಿತಿ ಬಗ್ಗೆ ನೀಡಿದ್ದಾರೆ. ತಮಗೆ ಗೊತ್ತಿದೆ, ಮೋತಿಚಲ್ಲಂ ಕೆರೆಗೆ ಹೊನ್ನಾಪುರ ಕೆರೆಗೆ ತಾಂತ್ರಿಕ ಆಡಳಿತ ಮಂಜೂರಾತಿಗಳಿಲ್ಲದೆ ಹಣ ಕೊಟ್ಟಿದ್ದೀರಿ. ಆ ಹಣ ತೆಗೆದು ಈ ಬ್ಯಾರೇಜ್ ಗೆ ಇಟ್ಟು ಅನಂತರ ಆ ಕೆಲಸಗಳನ್ನು ಕೈಗೆತ್ತಿಕೊಳ್ಳಿ. ಅದೂ ಆಗುವುದಿಲ್ಲ ಇದೂ ಆಗುವುದಿಲ್ಲ ಯಾಕೆ ಈ ರೀತಿ ನಿಮ್ಮ ಇಲಾಖೆಯಿಂದ ಮಾಡುತ್ತಿದ್ದೀರಿ? ಇದರ ಬಗ್ಗೆ ತಾವು ಕಾಳಜಿವಹಿಸಿ ಉತ್ತರ ಕೊಡಿ.

ಶ್ರೀ ತಿಪ್ಪೇಸ್ವಾಮಿ :— ಅಧ್ಯಕ್ಷರೇ, ಶಾಸಕರು ಹೇಳಿದ ಕೆಲಸಕ್ಕೆ ಈ ವರ್ಷದ ಆಯವ್ಯಯದಲ್ಲೇ ಹಣ ಒದಗಿಸಿದ್ದೇವೆ. ಇದಕ್ಕೆ ಒನ್ ಥರ್ಡ್ ಹಣ ಕೊಡಬೇಕಾಗಿತ್ತು, ಕಾರಣಾಂತರಗಳಿಂದ ವಿಳಂಬವಾಗಿದೆ. ನಾನು ಏತಕ್ಕೆ ಮಾರ್ಚ್‌ವರೆಗೆ ಗಡುವಿಟ್ಟಿದ್ದೇನೆ ಅಂದರೆ ಆ ಹೊತ್ತಿಗೆ ಕೆಲವು ಕಾಮಗಾರಿಗಳನ್ನು ಪೂರೈಸುವುದಕ್ಕೆ ಆಗಿರುವುದಿಲ್ಲ. ಅಲ್ಲಿ ಉಳಿದ ಹಣವನ್ನು ಇಂತಹ ಪ್ರಾಮುಖ್ಯ ಕಾಮಗಾರಿಗಳಿಗೆ ಕೊಡಲು ಅವಕಾಶ ಇದೆ. ನಾನು ಡಿಸೆಂಬರ್ ತಿಂಗಳವರೆಗಿದ್ದರೂ ನನ್ನ ಕಾರ್ಯದರ್ಶಿಗಳ ಹತ್ತಿರ ಇದರ ಬಗ್ಗೆ ಆಗಲೇ ಸಮಾಲೋಚನೆ ಮಾಡಿದ್ದೇನೆ.

ಈ ವರ್ಷದಲ್ಲಂತೂ ಇದಕ್ಕೆ ಹಣ ತೊಡಗಿಸಿ ಸದಸ್ಯರ ಕೆಲಸ ಮಾಡಿಕೊಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್ :— ನನ್ನದೇ ಕ್ಷೇತ್ರದ ಯೋಜನೆಗೆ ಹಣ ಇಟ್ಟಿದ್ದಾರೆ ಅದಕ್ಕೆ ಆಡಳಿತ ತಾಂತ್ರಿಕ ಮಂಜೂರಾತಿಗಳು ಇನ್ನೂ ಸಿಕ್ಕಿಲ್ಲ. ಅದೆಲ್ಲಾ ಸಿಕ್ಕಿರುವ ಯೋಜನೆಗೆ ಆ ಹಣ ಡೈವರ್ಟ್ ಮಾಡಿ ಯೋಜನೆ ಮುಗಿಸಿ ಎನ್ನುವ ಬಗ್ಗೆ ತಾವೇನೂ ಉತ್ತರ ಕೊಡುತ್ತಿಲ್ಲ.

ಶ್ರೀ ತಿಪ್ಪೇಸ್ವಾಮಿ :— ಅಧ್ಯಕ್ಷರೇ, ಬಜೆಟ್‌ನಲ್ಲಿ ಹಣ ಇಡುವಂತಹ ಸಂದರ್ಭದಲ್ಲಿ ಟೆಕ್ನಿಕಲ್ ಒಪಿನಿಯನ್ ಸಿಕ್ಕಿದೆಯೋ ಇಲ್ಲವೋ ಎಂಬುದನ್ನು ನಾವು ನೋಡುವುದಿಲ್ಲ. ಶಾಸಕರು ಕೇಳಿದ ಕಾಮಗಾರಿಗಳಿಗೆ ಹಣ ಕೊಡಬೇಕು. ಆಮೇಲೆ ಟೆಕ್ನಿಕಲ್ ಮಂಜೂರಾತಿ ಸಲಹಾ ಸಮಿತಿಯಿಂದ ಒಪ್ಪಿಗೆ ಪಡೆಯುತ್ತೇವೆ. ಈ ದೃಷ್ಟಿಯಿಂದ ಮಾಡಿದ್ದೇವೆ ವಿನಾ ಇದರಲ್ಲಿ ತಾರತಮ್ಯ ಮಾಡುವ ಉದ್ದೇಶ ನಮ್ಮದಲ್ಲ.

ಅಧ್ಯಕ್ಷರು :— ಅವರದೇ ಕ್ಷೇತ್ರದಲ್ಲಿ ಇನ್ನೊಂದು ಕೆಲಸ ನಮೂದಾಗಿದೆ, ಅದಕ್ಕೆ ಯಾವ ಮಂಜೂರಾತಿ ದೊರೆತಿಲ್ಲ. ಅದರದ್ದೇ ಹಣ ಇದಕ್ಕೆ ಡೈವರ್ಟ್ ಮಾಡಿ, ಇದಕ್ಕೆ ತಾಂತ್ರಿಕ ಆಡಳಿತ ಮಂಜೂರಾತಿ ಸಿಕ್ಕಿದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ತಿಪ್ಪೇಸ್ವಾಮಿ :— ಈ ಕೆಲಸವನ್ನು ನಾನು ಮಾಡಿಕೊಡುತ್ತೇನೆ.

MR. SPEAKER :— The probelm is solved.

ಸಂತೇಮಾರಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ಅಪಘಾತದಲ್ಲಿ ಮೃತರಾದವರಿಗೆ ಪರಿಹಾರ.

366(2117) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :—ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸಂತೇ ಮಾರಳ್ಳಿ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ವಿದ್ಯುತ್ ಅಪಘಾತದಲ್ಲಿ ಮೃತರಾದವರ ಒಟ್ಟು ಸಂಖ್ಯೆ ಎಷ್ಟು. (ಗ್ರಾಮವಾರು ಹೆಸರು ಸಹಿತ ವಿವರ ನೀಡುವುದು);

ಆ) ಮೃತರಾದವರ ಕುಟುಂಬದವರಿಗೆ ಸರ್ಕಾರದವರು ಪರಿಹಾರ ಧನವನ್ನು ಮಂಜೂರು ಮಾಡಿದ್ದಾರೆಯೇ (ವಿವರ ನೀಡುವುದು);

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ಯಾವಾಗ ನೀಡಲಾಗುವುದು ಮತ್ತು ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಒಬ್ಬ ವ್ಯಕ್ತಿಯು ವಿದ್ಯುತ್ ಅಪಘಾತದಿಂದ ಮೃತಪಟ್ಟಿರುತ್ತಾರೆ. ವಿವರಗಳು ಕೆಳಕಂಡಂತಿದೆ.

1) ಮೃತಪಟ್ಟ ವ್ಯಕ್ತಿಯ ಹೆಸರು ಶ್ರೀ ಪುಟ್ಟ.

2) ತಂದೆಯ ಹೆಸರು ಶ್ರೀ ಎಸ್. ಸುಬ್ಬೇಗೌಡ

3) ಗ್ರಾಮದ ಹೆಸರು ಹೆಬ್ಬಸೂರು

4) ಹೋಬಳಿ ತಾಲ್ಲೂಕು ಚಂದಕವಾಡಿ ಚಾಮರಾಜನಗರ

5) ವಿದ್ಯುತ್ ಅಪಘಾತ ಉಂಟಾದ ದಿನಾಂಕ : 30-12-96

ಆ), ಇ) 30-12-96 ರಂದು ವಿದ್ಯುತ್ ಅಪಘಾತಕ್ಕೆ ಒಳಗಾಗಿ ಮೃತರಾದ ಶ್ರೀ ಪುಟ್ಟರವರ ಪ್ರಕರಣದಲ್ಲಿ ಪರಿಹಾರ ಧನವನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಕಾರಣವೇನೆಂದರೆ, ಈ ವಿದ್ಯುತ್ ಅಪಘಾತಕ್ಕೆ ಮಂಡಳಿಯು ಜವಾಬ್ದಾರರಲ್ಲ.

ಎ.ಆರ್. ಕೃಷ್ಣಮೂರ್ತಿ :— ನನ್ನ ಸಂತೆಮಾರಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತದಿಂದ ಕಳೆದ ಮೂರು ವರ್ಷಗಳಿಂದ ಸತ್ತವರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಕೊಟ್ಟಿರುವ ಕನ್ನಡದ ಉತ್ತರದಲ್ಲಿ ಒಬ್ಬ ವ್ಯಕ್ತಿ ಅಂದರೆ ಪುಟ್ಟ ತಂದೆ ಹೆಸರು ಸುಬ್ಬೇಗೌಡ ಎಂದು ವಿವರ ಕೊಟ್ಟಿದ್ದಾರೆ. ಇದಕ್ಕೆ ಪರಿಹಾರ ಕೊಡುವ ಸಂದರ್ಭ